ಕರ್ನಾಟಕ ಸರ್ಕಾರ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಜವರನಹಳ್ಳಿ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಜವರನಹಳ್ಳಿ ಗ್ರಾಮದಿಂದ ದೇವಿಹಳ್ಳ ಗ್ರಾಮಕ್ಕೆ ವರ್ಗಾಯಿಸಿ, ದೇವಿಹಳ್ಳ ಗ್ರಾಮ ಪಂಚಾಯತಿಯನ್ನಾಗಿ ಮನರಚಿಸುವ ಕುರಿತು – ಆದೇಶ

ಓದಲಾಗಿದೆ:
1. ಅಧಿಸೂಚನೆ ಸಂಖ್ಯೆ ನಅಇ 116 ಎಂಎಲ್ಆರ್ 2016, ಬೆಂಗಳೂರು ದಿನಾಂಕ 30.11.2017.
2. ಮಂಡ್ಯ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ ಇಎಲ್ಎನ್(2)/23/2018-19, ದಿನಾಂಕ: 20.11.2018.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಜವರನಹಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿಯ ಜವರನಹಳ್ಳಿ ಹಾಗೂ ಬೊಮ್ಮನಹಳ್ಳಿ ಗ್ರಾಮಗಳನ್ನು ಸಂಪೂರ್ಣವಾಗಿ ಮತ್ತು ಗೋವಿಂದಘಟ್ಟ ಹಾಗೂ ದೊಡ್ಡಘಟ್ಟ ಗ್ರಾಮಗಳನ್ನು ಭಾಗಶಃ ಬೆಳ್ಳೂರು ಪಟ್ಟಣ ಪಂಚಾಯತಿಗೆ ಸೇರ್ಪಡೆ ಮಾಡಿ ಆದೇಶಿಸಲಾಗಿದೆ.

ಮೇಲ್ದರ್ಜೆಗೇರಿರುವ ಜವರನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಿಂದ ಕೈಬಿಡಲಾದ ಗ್ರಾಮಗಳು ಈ ಮುಂದಿನಂತಿವೆ. 1. ಹಳ್ಳೇನಹಳ್ಳಿ 2. ಚಾಕೇನಹಳ್ಳಿ 3. ದ್ಯಾಮಸಂದ್ರ 4. ಮಂತನಹಳ್ಳಿ, 5. ವರಾಹಸಂದ್ರ, ಲಕ್ಷ್ಮೀಪುರ ದಾಖಲೆ ಗ್ರಾಮ 6. ಅಗಚನಳ್ಳಿ, ಮಾರುತಿಪುರ ದಾಖಲೆ ಗ್ರಾಮ 7. ದೇವಿಹಳ್ಳಿ(ಕೇಂದ್ರ ಸ್ಥಾನ) 8. ಕನ್ನಾಘಟ್ಟ 9. ಚಾಮಲಾಪುರ 10. ಗೋವಿಂದಘಟ್ಟ 11. ದೊಡ್ಡಘಟ್ಟ 12. ಮಾರದೇವನಹಳ್ಳಿ 13. ದಡಗ, ಚಾಮನಕೊಪ್ಪಲು ದಾಖಲೆ ಗ್ರಾಮ 14. ಸಣಬ.

ಮೇಲೆ ಓದಲಾದ (2) ರಲ್ಲಿ ಮೇಲ್ದರ್ಜೆಗೇರಿರುವ ಜವರನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಿಂದ ಕೈಬಿಡಲಾದ ಗ್ರಾಮಗಳ ಒಟ್ಟು ಜನಸಂಖ್ಯೆ 2011 ರ ಜನಗಣತಿಯ ಪ್ರಕಾರ 5621 ಆಗಿರುತ್ತದೆ. ದೇವಿಹಳ್ಳಿ ಗ್ರಾಮವು ಗ್ರಾಮ ಪಂಚಾಯತಿಯ ಉಳಿದ ಎಲ್ಲಾ ಗ್ರಾಮಗಳಿಗೆ ಉತ್ತಮ ರಸ್ತೆ ಸಂಪರ್ಕ ಹೊಂದಿದ್ದು, ರಾಷ್ಟ್ರೀಯ ಹೆದ್ದಾರಿಯು ಈ ಗ್ರಾಮದ ಮೂಲಕ ಹಾದು ಹೋಗುವುದರಿಂದ ಜನಸಾಮಾನ್ಯರು ಗ್ರಾಮ ಪಂಚಾಯತಿ ಕಛೇರಿಗೆ ಬರಲು ಅನುಕೂಲಕರವಾಗಿರುತ್ತದೆಂದು ಈ ಕಾರಣದಿಂದಾಗಿ ದೇವಿಹಳ್ಳಿ ಗ್ರಾಮವನ್ನು (ಹಾಲಿಯಿರುವ ಜವರನಹಳ್ಳಿ ಗ್ರಾಮಕ್ಕೆ ಬದಲಾಗಿ) ಗ್ರಾಮ ಪಂಚಾಯತಿ ಕೇಂದ್ರ ಸ್ಥಾನ ಮಾಡುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಹಶೀಲ್ದಾರ್ ನಾಗಮಂಗಲ ತಾಲ್ಲೂಕು ರವರು ಜಂಟಿ ವರದಿಯನ್ನು ಉಪವಿಭಾಗಾಧಿಕಾರಿಗಳು, ಪಾಂಡವಪುರ ಉಪವಿಭಾಗ ರವರ ಮುಖೇನ ಸಲ್ಲಿಸಿರುತ್ತಾರೆ. ಈ ಮೇರೆಗೆ ಜವರನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಉಳಿದುಗೊಂಡಿರುವ 14 ಗ್ರಾಮಗಳು ಹಾಗೂ ದಾಖಲೆ ಗ್ರಾಮಗಳನ್ನೊಳಗೊಂಡಂತೆ ದೇವಿಹಳ್ಳಿ ಗ್ರಾಮವನ್ನು ಕೇಂದ್ರ ಸ್ಥಾನವನ್ನಾಗಿಸಿ, ದೇವಿಹಳ್ಳಿ ಗ್ರಾಮ ಪಂಚಾಯತಿಯನ್ನಾಗಿ ಪುನರ್ ರಚಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 4(1) ರನ್ವಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ದೇವಿಹಳ್ಳಿ ಗ್ರಾಮ ಪಂಚಾಯತಿಯನ್ನು ಅಭಿವೃದ್ಧಿ ಹಾಗೂ ಆಡಳಿತಾತ್ಮಕ ಕಾರಣಗಳಿಂದಾಗಿ ಪುನರ್ ರಚಿಸಬೇಕಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4(1) ಮತ್ತು 4(1)(ಸಿ) ರನ್ವಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಒಂದು ಗ್ರಾಮವನ್ನು ಅಥವಾ ಗ್ರಾಮಗಳ ಗುಂಪನ್ನು ಒಳಗೊಂಡಿರುವ ಯಾವುದೇ

ಪ್ರದೇಶವನ್ನು ಪಂಚಾಯತಿ ಪ್ರದೇಶವೆಂದು ಘೋಷಿಸಲು ಜಿಲ್ಲಾಧಿಕಾರಿಗಳು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ. ಆದ್ದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4(1) ಮತ್ತು 4(1)(ಸಿ) ರನ್ವಯ ದೇವಿಹಳ್ಳಿ ಗ್ರಾಮ ಪಂಚಾಯತಿಯನ್ನು ರಚಿಸಬಹುದಾಗಿದೆ. ಅದರಂತೆ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 722 ಗ್ರಾಪಂಅ 2018,**

**ಬೆಂಗಳೂರು, ದಿನಾಂಕ: 09.01.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4(1) ಮತ್ತು 4(1)(ಸಿ) ರನ್ವಯ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಜವರನಹಳ್ಳಿ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಜವರನಹಳ್ಳಿ ಗ್ರಾಮದಿಂದ ದೇವಿಹಳ್ಳಿ ಗ್ರಾಮಕ್ಕೆ ವರ್ಗಾಯಿಸಿ 1. ಹಳ್ಳೇನಹಳ್ಳಿ 2. ಚಾಕೇನಹಳ್ಳಿ 3. ದ್ಯಾಮಸಂದ್ರ 4. ಮಂತನಹಳ್ಳಿ, 5. ವರಾಹಸಂದ್ರ, ಲಕ್ಷ್ಮೀಪುರ ದಾಖಲೆ ಗ್ರಾಮ 6. ಅಗಚನಳ್ಳಿ, ಮಾರುತಿಪುರ ದಾಖಲೆ ಗ್ರಾಮ 7. ದೇವಿಹಳ್ಳಿ(ಕೇಂದ್ರ ಸ್ಥಾನ) 8. ಕನ್ನಾಘಟ್ಟ 9. ಚಾಮಲಾಪುರ 10. ಗೋವಿಂದಘಟ್ಟ 11. ದೊಡ್ಡಘಟ್ಟ 12. ಮಾರದೇವನಹಳ್ಳಿ 13. ದಡಗ, ಚಾಮನಕೊಪ್ಪಲು ದಾಖಲೆ ಗ್ರಾಮ 14. ಸಣಬ. ಗ್ರಾಮಗಳನ್ನೊಳಗೊಂಡ ದೇವಿಹಳ್ಳಿ ಕೇಂದ್ರ ಸ್ಥಾನವಾಗುಳ್ಳ ದೇವಿಹಳ್ಳಿ ಗ್ರಾಮ ಪಂಚಾಯತಿಯನ್ನು ಪುನರ್ ರಚಿಸಲು ಸರ್ಕಾರ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

9/1/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ.
4. ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
5. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
6. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ., ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜವರನಹಳ್ಳಿ ಗ್ರಾಮ ಪಂಚಾಯತಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
5. ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.